ಓಎಸ್ 7/2022
ಪಿಡಬ್ಲ್ಯೂ-1

ದಿ: 22.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಹೆಚ್.ಎಸ್.ಪಿ ವಕೀಲರಿಂದ**

ನಾನು ಮತ್ತು ಪ್ರತಿವಾದಿಗಳು ದಾಯಾದಿಗಳಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ದಾಯಾದಿಗಳಲ್ಲದೇ ಇದ್ದರೂ ಸಹಾ ದಾಯಾದಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ದಾಯಾದಿಗಳು ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ, ಆದರೆ ದಾಯಾದಿಗಳಾಗಿರುತ್ತೇವೆ. ಸ.ನಂ. 50 ರ ಸಂಪೂರ್ಣ ಆಸ್ತಿಗಳು ನಮ್ಮ ಅಣ್ಣ - ತಮ್ಮಂದಿರಿಗೆ ಸೇರಿದ ಆಸ್ತಿಗಳಾಗಿರುತ್ತದೆ. ಸ.ನಂ. 50 ರ ಆಸ್ತಿಯು 4-5 ಪೋಡಾಗಿದೆ. ನನ್ನ ಜಮೀನಿನಲ್ಲಿ ಬೋರ್ವೆಲ್ ಇದೆ. ಸ.ನಂ. 52 ರಲ್ಲಿ 6 ಎಕರೆ 10 ಗುಂಟೆ ಇದೆ, ಸ.ನಂ. 51 ರಲ್ಲಿ

1 ಎಕರೆ 33 ಗುಂಟೆ ಇದೆ. ಸ.ನಂ. 52 ರಲ್ಲಿ 6 ಎಕರೆ 10 ಗುಂಟೆ ಪೈಕಿ 1 ಎಕರೆ 33 ಗುಂಟೆ ಪ್ರತಿವಾದಿ 1 ರವರಿಗೆ ಸೇರಿದೆ. 2ನೇ ಪ್ರತಿವಾದಿಗೆ ಎಷ್ಟು ಸೇರಿದೆ ಎಂದು ಗೊತ್ತಿಲ್ಲ, ಆದರೆ ಒಂದೇ ಬೌಂಡರಿ . ಗುರುಮೂರ್ತಿ ರವರಿಗೆ ಒಟ್ಟು 4 ಎಕರೆ ಚಿಲ್ಲರೆ ಜಮೀನು ಇತ್ತು, 2 ಎಕರೆ ಮಾರಾಟ ಮಾಡಿದ್ದಾರೆ, ಈಗ 2 ಎಕರೆ ಚಿಲ್ಲರೆ ಇದೆ. ನಮ್ಮ ದಾರಿಯಿಂದ ದಕ್ಷಿಣಕ್ಕೆ 3ನೇ ಪ್ರತಿವಾದಿಯು ತನ್ನ ಜಮೀನನ್ನು ಉಳಿಸಿಕೊಂಡಿದ್ದಾರೆ.

ನಾನು ನನ್ನ ದಾವಾ ಪ್ಯಾರಾ 3 ರಲ್ಲಿ ಸ.ನಂ. 52 ಮತ್ತು 53 ರ ಜಮೀನಿನ ದಕ್ಷಿಣ ದಿಕ್ಕಿನಲ್ಲಿ ಹೊಂದಿಕೊಂಡಂತೆ ಪೂರ್ವ – ಪಶ್ಚಿಮವಾಗಿ ಇದೆ ಎಂದು ಹೇಳಲಾದ ರಸ್ತೆ ಮೊದಲಿನಿಂದಲೂ ಇದೆ, ಅದು ನಕಾಶೆಯಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ರಂಗುಪುರಕ್ಕೆ ಹೋಗುತ್ತದೆ ಎಂದು ನುಡಿಯುತ್ತಾರೆ. ಪೂರ್ವ – ಪಶ್ಚಿಮವಾಗಿ ಹೋಗಿರುವ ರಸ್ತೆ ರಾಮುಂಡಿ ಕಟ್ಟೆಯಿಂದ ರಂಗುಪುರಕ್ಕೆ ಹೋಗುತ್ತದೆ ಅಲ್ಲಿಂದ ನಮ್ಮ ಸ.ನಂ. 50 ರ ತನಕ ಬರುತ್ತದೆ. ನಾನು ಪೂರ್ವ – ಪಶ್ಚಿಮವಾಗಿ ಇದೆ ಎಂದು ಹೇಳಲಾದ ರಸ್ತೆಯು ಸ.ನಂ. 50 ರ ತನಕ ಬರುವುದಿಲ್ಲ ಅದು ಸ.ನಂ. 52 ರ ಪಶ್ಚಿಮ ದಿಕ್ಕಿಗೆ ಮಾತ್ರ ಬರುತ್ತದೆ ಮುಂದಕ್ಕೆ ಬರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಅಣ್ಣ – ತಮ್ಮಂದಿರಿಗೆಲ್ಲಾ ಒಂದೇ ಬೌಂಡರಿ ಅಲ್ಲೇ ಓಡಾಡುವುದು ಎಂದು ನುಡಿಯುತ್ತಾರೆ. ಆ ರಸ್ತೆಯು ಸ.ನಂ. 50 ರ ತನಕ ಬರುವುದಿಲ್ಲ ಸ.ನಂ. 52 ರ ಪಶ್ಚಿಮಕ್ಕೆ ಕೊನೆಯಾಗುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಸ.ನಂ. 52 ರ ಪಶ್ಚಿಮ ದಿಕ್ಕಿಗೆ ಬಂದು ಸೇರುತ್ತದೆ ಎಂದು ಹೇಳಿರುತ್ತೇನೆ ಆದರೂ ಸಹಾ ಸ.ನಂ. 50 ರವರೆಗೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸ.ನಂ. 51 ಮತ್ತು 52 ರ ಮಧ್ಯ ಭಾಗದಲ್ಲಿ ದಾವಾ ಷೆಡ್ಯೂಲ್ ಆಸ್ತಿ ಬರುವುದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಷೆಡ್ಯೂಲ್ ನಲ್ಲಿ ತೋರಿಸಿರುವಂತಹ ಇದೆ ಎನ್ನಲಾದ ರಸ್ತೆಯ ಜಾಗದಲ್ಲಿ ಸಂಪೂರ್ಣವಾಗಿ 40–50 ವರ್ಷಗಳ ದೊಡ್ಡ – ದೊಡ್ಡ ಮರಗಳು ಬೆಳೆದಿದೆ ಆದರೂ ನಾನು ರಸ್ತೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಯಾವುದೇ ರಸ್ತೆ ಇಲ್ಲ ದೊಡ್ಡ – ದೊಡ್ಡ ಮರಗಳು ಬೆಳೆದು ಅದು ಗುತ್ತಿಯಾಗಿದೆ ಮತ್ತು ಅಲ್ಲಿ ಮನುಷ್ಯರು ಓಡಾಡಲು ಆಗುವುದೇ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಹೇಳಿದಂತೆ ನಾನಾಗಲೀ ನನ್ನ ಕುಟುಂಬದವರಾಗಲೀ ಯಾವುದೇ ಕೃಷಿ ಚಟುವಟಿಕೆಯ ಸಾಮಾನುಗಳನ್ನು ಮತ್ತು ಜಾನುವಾರುಗಳನ್ನು ಸದರಿ ಇದೆ ಎನ್ನಲಾದ ರಸ್ತೆಯಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯ ರಸ್ತೆ ಅಸ್ಥಿತ್ವವೇ ಇಲ್ಲ, ನಾನು ಮತ್ತು ನಮ್ಮ ಕುಟುಂಬದವರು ಬೇರೆ ಬದಲಿ ರಸ್ತೆಯಲ್ಲಿ ಓಡಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ನನಗೆ ಯಾವುದೇ ಅನುಭೋಗದ ಹಕ್ಕಿಲ್ಲ ನಾನು

ಅನುಭೋಗದ ಹಕ್ಕಿದೆ ಎಂಬುದಾಗಿ ಸುಳ್ಳು ಕಾರಣ ಹೇಳಿ ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸರಿಯಲ್ಲ.

ದಿಃ 05.12.2021 ರಂದು ಪ್ರತಿವಾದಿಗಳು ನಮ್ಮ ಅನುಭೋಗದ ಹಕ್ಕಿಗೆ ತೊಂದರೆ ನೀಡಿಲ್ಲ ಅಲ್ಲಿ ಯಾವುದೇ ರಸ್ತೆ ಇಲ್ಲದಿದ್ದರೂ ಸಹಾ ಸುಳ್ಳು ವ್ಯಾಜ್ಯ ಕಾರಣ ನೀಡಿ ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಡಿಸೆಂಬರ್ ತಿಂಗಳಿನಲ್ಲಿ ತೊಂದರೆ ನೀಡಿರುತ್ತಾರೆ. ನಾನು ನನ್ನ ಪ್ರಮಾಣ ಪತ್ರಿಕೆಯಲ್ಲಿ ವ್ಯಾಜ್ಯ ಕಾರಣವನ್ನು ಒಂದು ದಿನಾಂಕ ತೋರಿಸಿದ್ದೇನೆ ಮತ್ತು ನನ್ನ ವಾದಪತ್ರದಲ್ಲಿ ಒಂದು ದಿನಾಂಕ ತೋರಿಸಿದ್ದೇನೆ, ಒಂದು ವೇಳೆ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದೇ ಆಗಿದ್ದಲ್ಲಿ ನಾನು ನಿರ್ದಿಷ್ಟ ದಿನಾಂಕ ನಮೂದು ಮಾಡಿ ದಾವಾ ಹಾಕುತ್ತಿದ್ದೆ, ಪ್ರತಿವಾದಿಗಳು ತೊಂದರೆ ಕೊಡದ ಕಾರಣ ನಾನು ವಾದಪತ್ರದಲ್ಲಿ ಒಂದು ದಿನಾಂಕವನ್ನು ಪ್ರಮಾಣ ಪತ್ರದಲ್ಲಿ ಒಂದು ದಿನಾಂಕವನ್ನು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ಕೊಟ್ಟ ನಂತರ ನಾನು ಗುಂಡ್ಲುಪೇಟೆ ತಾಲ್ಲೂಕು ಕಛೇರಿಗೆ ದೂರು ಕೊಡಲು ಹೋಗಿದ್ದೆ, ಅದರೆ ವಕೀಲರು ನ್ಯಾಯಾಲಯದಲ್ಲಿ ದಾವಾ ಹಾಕಿಸಿರುತ್ತಾರೆ. ಒಂದು ವೇಳೆ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದೇ ಆಗಿದ್ದಲ್ಲಿ ನಾನು ಪೊಲೀಸ್ ಠಾಣೆಗೆ ದೂರು ಕೊಡುತ್ತಿದ್ದೆ, ತೊಂದರೆ ಕೊಡದ ಕಾರಣ ನಾನು ದೂರು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ನೀಡಿದಾಗ ನಾನು ಯಾವುದೇ ಮುಖ್ಯಸ್ಥರಿಗೆ ಹೇಳಿಲ್ಲ. ನನಗೆ ಯಾವುದೇ ಕಿರುಕುಳ ಕೊಡದೇ ಇದ್ದರೂ ಸಹಾ ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಾವಾ ಹಾಕುವ ವೇಳೆಯಲ್ಲಿ ಸ.ನಂ. 52 ರ ಜಮೀನು 3ನೇ ಪ್ರತಿವಾದಿಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಹಾಕುವ ವೇಳೆಯಲ್ಲಿ 3ನೇ ಪ್ರತಿವಾದಿಯ ಹೆಸರಿನಲ್ಲಿ ಸ.ನಂ. 52 ಇರಲಿಲ್ಲ, ಅದರೂ ನಾನು ಅನಾವಶ್ಯಕ ಪಕ್ಷಗಾರರನ್ನಾಗಿ 3ನೇ ಪ್ರತಿವಾದಿಯನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದಲ್ಲಿ ಇತ್ತು, ಈಗ ಪ್ರತ್ಯೇಕ ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ಸ.ನಂ. 50/3, 50/4 ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ನಾನು ಸ.ನಂ. 50/3 ಮತ್ತು 50/4 ಜಮೀನುಗಳು ಪೂರ್ವ ಬಾಜುವಿನಲ್ಲಿರುವ ಸ.ನಂ. 39 ರ ಪೂರ್ವ ದಿಕ್ಕಿನಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಇರುವ ಬಂಡಿದಾರಿಯಲ್ಲಿ ಬಂದು ಸ.ನಂ. 39 ರ ದಕ್ಷಿಣ ದಿಕ್ಕಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಬಂದು ನಮ್ಮ ಜಮೀನಿಗೆ ಬರುತ್ತೇವೆ ಮತ್ತು ಓಡಾಡುತ್ತಿರುತ್ತೇವೆ ಎಂದರೆ ಸರಿಯಲ್ಲ. ಸ.ನಂ. 39 ರ ದಕ್ಷಿಣ ದಿಕ್ಕಿನಲ್ಲಿರುವ ರಸ್ತೆಯಲ್ಲಿಯೇ ನಾವು ಮತ್ತು ನಮ್ಮ ಕುಟುಂಬದವರು ಮತ್ತು ಜನ ಜಾನುವಾರುಗಳು ಓಡಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸ.ನಂ. 39 ರ ದಕ್ಷಿಣದ ಪೂರ್ವ – ಪಶ್ಚಿಮ ರಸ್ತೆಯು

ಚೆನ್ನವಡೆಯನಪುರ ಮತ್ತು ದೊಡ್ಡಹುಂಡಿ ಗ್ರಾಮದ ಮುಖ್ಯ ರಸ್ತೆಯವರೆಗೂ ಹೋಗಿ ಸೇರುತ್ತದೆ ಎಂದರೆ ಸರಿಯಲ್ಲ. ಇದೇ ದಾರಿಯಲ್ಲೇ ನಾನು ಮತ್ತು ನಮ್ಮ ಪೂರ್ವಜರು ಓಡಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

ಸ.ನಂ. 50 ರ ಉತ್ತರ ಭಾಗದಲ್ಲಿರುವ ಸ.ನಂ. 49 ರಲ್ಲಿರುವ ನೀರಿನ ಹಳ್ಳದ ಮೂಲಕ ಬಂದು ಸ.ನಂ. 50/4 ರ ಜಮೀನಿಗೆ ನಾವು ಓಡಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ತೋರಿಸಿರುವ ಚೆಕ್ಕುಬಂದಿ ನಮ್ಮ ಕಾಲ್ಪನಿಕವಾದ ಚೆಕ್ಕುಬಂದಿಯಾಗಿರುತ್ತದೆ ಅಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ 12 x  500 ಅಡಿ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಯಾವುದೇ ದಾರಿ ಇಲ್ಲದೇ ಇದ್ದರೂ ಸಹಾ  ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ದಾರಿ ಇದ್ದಲ್ಲಿ ಸರ್ಕಾರಿ ನಕಾಶೆಯಲ್ಲಿ ಆ ದಾರಿ ಕಂಡುಬರುತ್ತಿತ್ತು, ಸ.ನಂ. 50 ರ ಜಮೀನಿಗೆ ರಸ್ತೆ ಇಲ್ಲದ ಕಾರಣ ಸರ್ಕಾರಿ ನಕಾಶೆಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು  ಪ್ರತಿವಾದಿಗಳು ದಾಯಾದಿಗಳಾಗಿದ್ದಲ್ಲಿ ನಮ್ಮ ಪೂರ್ವಿಕರು ಮತ್ತು ಪ್ರತಿವಾದಿಗಳ ಪೂರ್ವಿಕರು ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳುವಾಗ ನಮಗೆ ರಸ್ತೆಯನ್ನು ಬಿಟ್ಟಿದ್ದಲ್ಲಿ ಅದನ್ನು ತೋರಿಸಲು ಯಾವುದಾದರೂ ದಾಖಲೆಗಳನ್ನು  ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಗೆಯೇ ಓಡಾಡಿಕೊಳ್ಳಲು ಬಿಟ್ಟಿದ್ದರು ಎಂದು ನುಡಿಯುತ್ತಾರೆ. ನಾವು ಮತ್ತು  ಪ್ರತಿವಾದಿಗಳು ದಾಯಾದಿಗಳಾಗಿದ್ದಲ್ಲಿ ನಮ್ಮ ಪೂರ್ವಿಕರು ಮಾಡಿಕೊಂಡ ಮತ್ತು ರಸ್ತೆ ಬಿಟ್ಟ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಕೇವಲ ಕಾಲ್ಪನಿಕ ರಸ್ತೆ ಅದರ ಮೇಲೆ ನನಗಾಗಲೀ, ಇತರೆ ಯಾವುದೇ ವ್ಯಕ್ತಿಗಳಿಗಾಗಲೀ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ